# ಚೈತ್ರಾಗಮನ

ಹನ್ನೆರಡು ಮಾಸಗಳಿಂದ ಕೂಡಿದ ಒಂದು ಸಂವತ್ಸರವೆಂಬ ಕಾಲಮಾನದಲ್ಲಿ ಮೊದಲ ಸ್ಥಾನ ಚೈತ್ರಮಾಸಕ್ಕೆ. ಚೈತ್ರಮಾಸವನ್ನು ನಮ್ಮವರು ಮಧುಮಾಸವೆಂದೂ ಕರೆದಿದ್ದಾರೆ. ಮಧುವೆಂದರೆ ಜೇನು, ಜೇನೆಂದರೆ ಆರೋಗ್ಯ ಪೂರ್ಣವಾದ ಸಿಹಿ. ಚೈತ್ರಮಾಸ ಜೀವ ಜಗತ್ತಿಗೆ ಸವಿ ಹಾಗೂ ಸ್ವಾಸ್ಥ್ಯ ಎರಡನ್ನೂ ಉಣಬಡಿಸುವ ಕಾಲಘಟ್ಟ. ಅಂತೆಯೇ ಅದು 'ಮಧುಮಾಸ!' ಮಾಘ ಫಾಲ್ಗುಣಗಳಲ್ಲಿ ಪ್ರಕೃತಿ ಅನುಭವಿಸಿದ ಶಿಶಿರದ ಕಹಿ, ಮಧುಮಾಸವಾದ ಚೈತ್ರದ ಸಿಹಿಯಲ್ಲಿ ಮರೆಯಾಗುತ್ತದೆ. ಶಿಶಿರದ ದಿನಗಳಲ್ಲಿ ಗಿಡ ಮರ ಬಳ್ಳಿಗಳು ಎಲೆಗಳನ್ನು ಕಳೆದುಕೊಂಡು ಬೆತ್ತಲಾಗಿ, ಬದುಕಿನ ಚೆಲುವು ಗೆಲವುಗಳಿಗೆ ಬೆನ್ನು ಹಾಕಿ ಎಂಥದೋ ರೂಕ್ಷಸ್ಥಿತಿಗೆ ತಮ್ಮನ್ನು ಒಡ್ಡಿಕೊಂಡಿರುತ್ತವೆ. ಆದರೆ ಚೈತ್ರ ಕಾಲಿಟ್ಟೊಡನೆಯೇ ಶಬ್ದ, ಸ್ಪರ್ಶ, ರೂಪ, ರಸ, ಗಂಧ– ಈ ಎಲ್ಲ ನೆಲೆಗಳಲ್ಲೂ ಪ್ರಕೃತಿಯಲ್ಲಿ ಝಗ್ಗೆಂದು ಯಾವುದೋ ಸಂಚಲನೆ ಪುಟಿಯತೊಡಗುತ್ತದೆ. ಬರಲು ಬರಲಾಗಿದ್ದ ಮರಗಿಡ ಬಳ್ಳಿಗಳು ಪಲ್ಲವಿಸಿ, ಹೂಬಿಟ್ಟು, ಮಿಡಿಸೂಸಿ, ಹಣ್ಣಾಗಿ ಮಾಗಿ ಬದುಕಿನ ಸಮಸ್ತ ಚೆಲುವನ್ನೂ ಪ್ರಕಟಿಸುತ್ತವೆ. ಹಿಂದಿನ ದಿನಗಳಲ್ಲಿ ಎಲ್ಲೋ ಮರೆಯಾಗಿದ್ದ 'ಜೀವ ಧ್ವನಿ' ಕೋಗಿಲೆಯ ಕುಕಿಲಿನಲ್ಲಿ, ಜೇನು ದುಂಬಿಗಳ ಗುಂಜಾರವದಲ್ಲಿ ಮರುಹುಟ್ಟು ಪಡೆಯುತ್ತದೆ. ಬತ್ತಿಹೋಗಿದ್ದ ಜೀವಜಲ ನಿಧಾನವಾಗಿ ತನ್ನ ಚಲನಶೀಲತೆಯನ್ನು ನವೀಕರಿಸಿಕೊಂಡು, ನೆಲದಿಂದ ಬೇರಿಗೆ, ಬೇರಿನಿಂದ ಕಾಂಡ, ಕೊಂಬೆಗಳಿಗೆ ಪ್ರವಹಿಸುತ್ತದೆ. ಇದೆಲ್ಲದರ ಪರಿಣಾಮವಾಗಿ ಸಸ್ಯ ಜಗತ್ತಿನಲ್ಲಿ, ಪ್ರಾಣಿ ಪಕ್ಷಿ ಸಂಕುಲದಲ್ಲಿ ಹೊಸತನ, ಜೀವನೋತ್ಸಾಹ ಪ್ರಕಟಗೊಳ್ಳುವಂತಾಗುತ್ತದೆ. ಆಕಾಶ ಶುಭ್ರವಾಗಿ, ನಿರಭ್ರವಾಗಿ ಸೂರ್ಯನ ತೇಜಸ್ಸು, ಚಂದ್ರನ ತಂಪು ಬೆಳಕು, ನಕ್ಷತ್ರಗಳ ಮೃದುಲ ಮಂದಹಾಸ– ಈ ಎಲ್ಲವೂ ನಿರಾತಂಕವಾಗಿ ಹೊರ ಹೊಮ್ಮಲು ಅನುವು ಮಾಡಿಕೊಟ್ಟು, ಭೂಮಿಯ ಮೇಲಿನ 'ಜೀವ ರಥೋತ್ಸವ'ದ ಸಡಗರ ಸಂಭ್ರಮಗಳನ್ನು ಹೆಚ್ಚಿಸುತ್ತದೆ. ಒಟ್ಟಿನಲ್ಲಿ 'ಉದಿತ ದಿನ, ಮುದಿತ ವನ, ವಿಧ ವಿಧ ವಿಹಗ ಸ್ವನ! ಇದುವೆ ಜೀವ, ಇದು ಜೀವನ, ಪವನದಂತೆ ಪಾವನ!' ಎಂಬ ಬೇಂದ್ರೆಯವರ ಉದ್ಗಾರ 'ನಿಜ, ನಿಜ' ಎನ್ನುವಂತಾಗುತ್ತದೆ.

ಅದೆಲ್ಲವೂ ಸರಿಯೆ. ಆದರೆ ಕಾಲ ಪ್ರವಾಹದಲ್ಲಿ ಇಂಥದೊಂದು ಸ್ಥಿತ್ಯಂತರ ಕ್ರಮಬದ್ಧವಾಗಿ ಸಂಭವಿಸುವುದಾದರೂ ಹೇಗೆ? 'ವಿಲಯದಲ್ಲೂ ಚೆಲುವು ಚಿಮ್ಮುವ' ಚೋದ್ಯ ಘಟಿಸುತ್ತಿರುವುದರ ರಹಸ್ಯವಾದರೂ ಏನು? ವಿಶ್ವದಲ್ಲಿನ ಪರಿವರ್ತನ ಶೀಲತೆಯನ್ನು ಗಮನಿಸುತ್ತಾ, ಅದು ವ್ಯವಸ್ಥಿತವಾಗಿ ನಡೆಯುವಂತೆ ನೋಡಿಕೊಳ್ಳುತ್ತಿರುವ ಆ ಮಹಾಪ್ರಜ್ಞೆಯಾದರೂ ಯಾವುದು? ಇಂಥ ಪ್ರಶ್ನೆಗಳಿಗೆ ಖಚಿತವಾದ ಉತ್ತರಗಳಿಲ್ಲವೆಂದರೆ ತಪ್ಪಲ್ಲ. ವಿಶ್ವದ ವ್ಯವಸ್ಥೆಯ ಹಿಂದೆ ಒಂದು ನಿಯಮವಿದೆ ಎಂದು ನಂಬಿದ್ದ ನಮ್ಮ ದಾರ್ಶನಿಕರು, ಆ ನಿಯಮವನ್ನು 'ಋತ' ಎಂದು ಕರೆದರು. ಈ ನಿಯಮಕ್ಕೆ ಅನುಗುಣವಾಗಿ ಬದಲಾಗುವ ಕಾಲದ ಅವಧಿಗಳನ್ನು 'ಋತುಗಳು' ಎಂದು ಹೆಸರಿಸಿದರು. ಅವರ ಪ್ರಕಾರ ಋತದ ಕಟ್ಟಳೆಗಳಿಗೆ ಅನುಸಾರವಾಗಿ, ಸೃಷ್ಟಿಯ ಹಿಂದೆ ಯಾವುದೋ ಒಂದು ಅದೃಶ್ಯಯಂತ್ರ ನಿರಂತರವಾಗಿ ಕಾರ್ಯ ನಿರ್ವಹಿಸುತ್ತಾ, ಸೃಷ್ಟಿಯಲ್ಲಿನ ಸಮಸ್ತ ಆಗುಹೋಗುಗಳನ್ನೂ ನಿಯಂತ್ರಿಸುತ್ತಿದೆ. ಅಂತೆಯೇ ಇಲ್ಲಿನ ಜೀವರಾಶಿ ಪತನ ಅಭ್ಯುದಯಗಳ ಪಥದಲ್ಲಿ ಸೋಲು ಗೆಲವು, ಕಷ್ಟ ಸುಖಗಳನ್ನು ಅನುಭವಿಸುತ್ತಾ ಚಲಿಸುತ್ತಿದೆ. ಭೂಮಿಯ ಮೇಲಿನ ಬದುಕಿನಲ್ಲಿ ಹೇಮಂತ ಶಿಶಿರಗಳ ವಿಷಾದ ಪೂರ್ಣ ಪರಿಸರವೂ ಇದೆ; ಗ್ರೀಷ್ಮದ ತಪ್ತ ಸ್ಥಿತಿಯ ಜೊತೆಗೆ ವರ್ಷದ ಕರುಣಾ ವೃಷ್ಟಿಯೂ ಇದೆ; ಶರತ್ ವಸಂತಗಳ ಉತ್ಸಾಹ ಸಂಭ್ರಮಗಳೂ ಇವೆ. ಅರ್ಥಾತ್ ನಿರಾಶೆ, ದುಃಖ, ದುಮ್ಮಾನಗಳ ಮಗ್ಗುಲಲ್ಲೇ ಪ್ರತೀಕ್ಷೆ, ಭರವಸೆ, ಉಲ್ಲಾಸಗಳಿಂದ ಹುರಿಗೊಳ್ಳುವ ಹದುಳ ಬದುಕೂ ಇದೆ. ಆದರೆ ಯಾವುದೂ ಸ್ಥಿರವಲ್ಲ. ಎಲ್ಲವೂ ಪುನರಾವರ್ತನೆಗೆ ಒಳಗಾಗುತ್ತಲೇ ಇರುತ್ತವೆ. ಅದಕ್ಕಾಗಿಯೇ ಕವಿ ಕೆ.ಎಸ್.ನ ಹೀಗೆಂದಿರುವುದು:

*ಯಾರ ಕಣ್ಣು ಹಿಡಿದಿಹುದೊ ಎಲ್ಲವನು ಏಕ ಸೂತ್ರದಲ್ಲಿ!*
*ಅಗಲಿ ಕೂಡುವೆವು, ಅದನೆ ಹಾಡುವೆವು ಬಾಳ ಜಾತ್ರೆಯಲ್ಲಿ*
*ನಾಳೆಯಾಸೆಗಳು ಮೇಳಗಟ್ಟುತಿವೆ ಸೃಷ್ಟಿ ವೃತ್ತದಲ್ಲಿ;*
*ಎಷ್ಟು ಸತ್ತು, ಇನ್ನೆಷ್ಟು ಹುಟ್ಟುವುದೊ ಒಂದು ಬಿತ್ತದಲ್ಲಿ!*

■ **ವೈನತೇಯ**

## ಮಾತೇ ಮುತ್ತು

★ ಯಾವ ವ್ಯಕ್ತಿ ತನಗೆ ತಾನೇ ಕಡಿವಾಣ ಹಾಕಿಕೊಳ್ಳುವನೋ ಅವನೇ ಸ್ವತಂತ್ರ ವ್ಯಕ್ತಿ.
–ಮಹಾತ್ಮ ಗಾಂಧೀಜಿ

★ ಜನರ ಬಡತನ ತೊಲಗಿಸಬೇಕಾದರೆ ಕಡ್ಡಾಯ ಶಿಕ್ಷಣದ ಮೂಲಕ ಅವರಲ್ಲಿರುವ ಅಜ್ಞಾನ ತೊಲಗಿಸಿ ಮತ್ತು ಮಿತವ್ಯಯದ ಪಾಠ ಅವರಿಗೆ ಕಲಿಸಿ.
–ಎಂ.ವಿಶ್ವೇಶ್ವರಯ್ಯ

★ ಒಬ್ಬ ಅಂಜುಬುರುಕ– ಐವರು ಧೈರ್ಯಶಾಲಿಗಳನ್ನು ಅಂಜುಬುರುಕರನ್ನಾಗಿ ಮಾಡಬಲ್ಲ.
–ಜರ್ಮನಿ ಗಾದೆ

★ ಉತ್ತಮವಾದ ಪುಸ್ತಕ ನಕಾಶೆ ಇದ್ದಂತೆ. ಅದು ಊರಿಗೆ ದಾರಿಯನ್ನು ತೋರುತ್ತದೆ; ಆದರೆ, ಆ ಊರು ತಲುಪುವುದು ನಿನ್ನ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.
–ಸ್ವಾಮಿ ವಿವೇಕಾನಂದ

★ ಸಾಹಸಿಯಾದವನು, ಆಶಾವಾದಿಯಾದವನು ಒಮ್ಮೆ ವಿಫಲನಾದರೂ, ಭಗವಂತ ಅಂತಹವರಿಗೆ ಇನ್ನಷ್ಟು ಆಶಾದಾಯಕ ದಾರಿ ತೋರುತ್ತಾನೆ.
–ವೀರೇಂದ್ರ ಹೆಗ್ಗಡೆ

★ ಗಟ್ಟಿ ಮನಸ್ಸಿಲ್ಲದವನ ಮತ ಮೂಢನಂಬಿಕೆಯತ್ತ ಹೊರಳುತ್ತದೆ.
–ಆಂಗ್ಲ ಗಾದೆ

★ ಗೋಪ್ಯವಾಗಿ ಮಾಡುವ ಪರೋಪಕಾರ ಹೆಚ್ಚಿನ ಆನಂದವನ್ನು ತರುತ್ತದೆ.
–ಚಾರ್ಲ್ಸ್ ಲ್ಯಾಂಬ್

★ ಪುಸ್ತಕ ಭಂಡಾರವಿಲ್ಲದ ಮನೆ ಕಿಟಕಿಗಳಿಲ್ಲದ ಅರಮನೆಗೆ ಸಮಾನ.
–ಪುಸ್ತಕಪ್ರಿಯ

★ ಮನೆಯಲ್ಲಿ ಹಿರಿಯರೊಬ್ಬರು ಜೀವಂತ ಇರುವುದು, ಅಮೂಲ್ಯವಾದ ರತ್ನವೊಂದಿರುವುದಕ್ಕಿಂತ ಹೆಚ್ಚು.
–ಚೀನಿ ಗಾದೆ

★ ಜವಾಬ್ದಾರಿಯುಳ್ಳ ಒಬ್ಬ ತಂದೆ ನೂರು ಮಂದಿ ಆಸ್ಥಾನ ವಿದ್ವಾಂಸರುಗಳಿಗೆ ಸರಿಸಮಾನ.
–ಇಂಗ್ಲೆಂಡ್ ಗಾದೆ

★ ಸುಗುಣ ದೇಹದ ಚೆಲುವನ್ನು ಹೆಚ್ಚಿಸಿದರೆ, ದುರ್ಗುಣ ಅದನ್ನು ಕುಗ್ಗಿಸುತ್ತದೆ.
–ಲೋಕೋಕ್ತಿ

★ ಶಾಂತ ಸ್ವಭಾವ ಯಾರಲ್ಲಿ ಕಂಡುಬರುವುದಿಲ್ಲವೋ ಅವರು ಸುಖದಿಂದಿರುವುದು ಸಾಧ್ಯವಿಲ್ಲ.
–ಟ್ರೈಡನ್

★ ದಾರಿ ತಪ್ಪಿದರೆ ಹಿಂತಿರುಗಿ ಸರಿದಾರಿಯನ್ನು ಕಂಡುಕೊಳ್ಳಬಹುದು; ಬಾಯಿ ತಪ್ಪಿದರೆ ಆಡಿದ ಮಾತು ಹಿಂತಿರುಗಿ ಬರುವುದಿಲ್ಲ.
–ಟಿಬೆಟ್ ನಾಣ್ನುಡಿ

★ ಎರಡು ದಿನಗಳಿವೆ. ಅವುಗಳನ್ನು ಕುರಿತು ಯಾರೊಬ್ಬರೂ ವ್ಯಥಿಸಬಾರದು. ಆ ದಿನಗಳೆಂದರೆ 'ನಿನ್ನೆ' ಮತ್ತು 'ನಾಳೆ.'
–ಆರ್.ಜೆ.ಬರ್ಡೆಟ್

★ ಬಡವನನ್ನು ಅವನ ನೆರೆಹೊರೆಯವರೂ ದ್ವೇಷಿಸುತ್ತಾರೆ; ಆದರೆ ಶ್ರೀಮಂತನಿಗೆ ಅನೇಕ ಜನ ಮಿತ್ರರಿರುತ್ತಾರೆ.
–ಬೈಬಲ್

★ ಅದೃಷ್ಟವೆಂಬುದು ಬೆವರಿನ ಲಾಭಾಂಶ; ನೀನು ಹೆಚ್ಚು ಹೆಚ್ಚು ಬೆವರಿಳಿಸಿದಂತೆ ಅಷ್ಟಷ್ಟು ಅದೃಷ್ಟವಂತನಾಗುತ್ತೀ.
–ಆರ್.ಎ.ಕ್ರೋಕ್